

ಪಾಲನೆ ಪೋಷಣೆಯಲ್ಲಿ ಆಧುನಿಕ ಕಾಲದ ಪೋಷಕರು ಸೋಲುವುದು ಇದೇ ಘಟ್ಟದಲ್ಲಿ. ಹೆದರಿದವರ ಮೇಲೆ ಹಾವೆಸೆದಂತೆ, ಆದರ್ಶ ತಂದೆ–ತಾಯಿಗಳು ತಮ್ಮನ್ನು ಬಿಂಬಿಸಿಕೊಳ್ಳುತ್ತ ಸಾಮಾಜಿಕ ಜಾಲತಾಣದಲ್ಲಿ ಗೋಚರಿಸುವ ಕಥೆಗಳು, ರೀಲ್‌ಗಳು, ತಮ್ಮ ಮಕ್ಕಳು ಜಗತ್ತನ್ನು ಗೆಲ್ಲುತ್ತಿದ್ದಾರೆಂದೋ ಅಥವಾ ತಮ್ಮ ಮಕ್ಕಳು ಅತ್ಯಂತ ಸಂವೇದನಾಶೀಲರಾದ ಹೂ ಮನಸ್ಸಿನವರೆಂದೋ ಘೋಷಿಸಿಕೊಳ್ಳುವ ಅಪ್ಪ ಅಮ್ಮಂದಿರ ಕಥೆಗಳು ಎದುರಾಗುತ್ತವೆ.

'ಪ್ರತಿಯೊಂದು ಮಗುವೂ ವಿಶೇಷ ಮತ್ತು ವಿಭಿನ್ನ' ಎಂದು ಹೇಳುವ ಪೋಷಕರೇ, ತಮ್ಮ ಮಗು ವೇಗದ ಓಟದಲ್ಲಿ ಮುಂದಿಲ್ಲವಲ್ಲ ಎಂದು ಕೊರಗುವುದನ್ನು ಕಾಣುತ್ತೇವೆ. ಇಂತಹ ಸಾಮಾಜಿಕ ವಾತಾವರಣದಲ್ಲಿ ಮಕ್ಕಳನ್ನು ಸಾಕುವುದು ಸುಲಭವೆಂದು ಹೇಳುವುದಾದರೂ ಹೇಗೆ? ಮಕ್ಕಳು ತಮ್ಮ ಪಾಡಿಗೆ ತಾವು ಬೆಳೆಯುತ್ತಾರೆ ಎಂದು ಆರಾಮವಾಗಿ ಇರುವುದು ಸಾಧ್ಯವಾಗುವ ಮಾತೇ?

## ಇಂದಿಗೂ ಅವಳೇ ತಪ್ಪಿತಸ್ಥಳು!

ಇತ್ತೀಚೆಗೆ ಸಂಗೀತ ವಿದುಷಿ ಸಂಪ್ರತಿ ಒಂದು ಕಛೇರಿಯಲ್ಲಿ ಹಾಡುವುದಕ್ಕಾಗಿ ಮುಂಬೈಗೆ ತೆರಳಿದ್ದರು. ಅವರ ಮಗ ಏಳನೇ ತರಗತಿಯ ವೃಷಾಂಕ್ ಕೂಡ ಸಂಗೀತ ವಿದ್ಯಾರ್ಥಿ. ಆನ್‌ಲೈನ್ ಸಂಗೀತ ತರಗತಿಗೆ ಸಂಬಂಧಿಸಿದ ಮೆಸೇಜು ಸಂಪ್ರತಿಯ ಮೊಬೈಲ್‌ಗೆ ಬರುವುದು ವಾಡಿಕೆಯಾಗಿತ್ತು. ಆದರೆ ಅವತ್ತು ಮುಂಜಾನೆ 7 ಗಂಟೆಗೆ ತರಗತಿ ಇರುವುದಾಗಿ ಹಿಂದಿನ ದಿನ ರಾತ್ರಿ ಸಂಗೀತ ಗುರುಗಳು ಮೆಸೇಜು ಕಳಿಸಿದ್ದರು. ರಾತ್ರಿ ರೈಲಿನಲ್ಲಿ ಮಲಗಿದ್ದ ಸಂಪ್ರತಿ ಬೆಳಿಗ್ಗೆ ಏಳುವಷ್ಟರಲ್ಲಿ ಗಂಟೆ ಆರೂವರೆಯಾಗಿಬಿಟ್ಟಿತ್ತು. ಮನೆಯಲ್ಲಿದ್ದ ಮಗನಿಗೆ ವಿಷಯ ತಿಳಿಸಲು ಸಾಧ್ಯವಾಗದೇ ಒಂದು ತರಗತಿ ತಪ್ಪಿಹೋಯಿತು. ಮಗ ಹಾಜರಾಗಬೇಕಾದ ಒಂದು ತರಗತಿ ತಪ್ಪಿಹೋಯಿತು ಎನ್ನುವ ತಪ್ಪಿತಸ್ಥ ಭಾವನೆಯು ಆಕೆಯನ್ನು ದಿನವಿಡೀ ಹೈರಾಣ ಮಾಡುತ್ತಿತ್ತು.

ಸಂಪ್ರತಿ ಅವರಿಗೆ ಎದುರಾದ ಪರಿಸ್ಥಿತಿ ಸಾಮಾನ್ಯವಾಗಿ ಎಲ್ಲ ಕುಟುಂಬಗಳಲ್ಲೂ ಕಾಣಿಸುವಂತಹದ್ದು. ಇಲ್ಲೊಂದು ಪ್ರಶ್ನೆ ಎದುರಾಗುತ್ತದೆ. ಮಕ್ಕಳಿಗೆ ಸಂಬಂಧಿಸಿದ ಚಟುವಟಿಕೆಗಳ ಕೇಂದ್ರದಲ್ಲಿ ಸದಾ ಅಮ್ಮನೇ ಯಾಕೆ ಇರುತ್ತಾಳೆ? ಅಪ್ಪ ಯಾಕಿರುವುದಿಲ್ಲ? ಉತ್ತರ ಸರಳವಾದುದು: ಪಾಲನೆ ಪೋಷಣೆಯ ಜವಾಬ್ದಾರಿ ಹೆಣ್ಣಿನದೆನ್ನುವ ಅಲಿಖಿತ ನಿಯಮ.

ಭಾರತೀಯ ಕೌಟುಂಬಿಕ ವಾತಾವರಣದಲ್ಲಿ ಮಹಿಳೆಯರು ತಪ್ಪಿತಸ್ಥರಾಗಿ ನಿಲ್ಲುವುದು ಅತೀ ಸಾಮಾನ್ಯ. ಕೌಟುಂಬಿಕ ಜವಾಬ್ದಾರಿಯನ್ನು ತಲೆಯ ಮೇಲೆ ಹೊತ್ತುಕೊಂಡು ಎಲ್ಲರ ಬೇಕು ಬೇಡಗಳನ್ನು ನಿರ್ವಹಿಸುವ ಹೊಣೆಯನ್ನು ಆಕೆಗೆ ಹೊರಿಸಿಬಿಡಲಾಗುತ್ತದೆ ಮತ್ತು ಈ ಜವಾಬ್ದಾರಿಯ ಬೃಹತ್ ಮೂಟೆಯನ್ನು ಹೊತ್ತ ಮಹಿಳೆಗೆ, 'ತಾಯಿಯೇ ದೇವರು' ಎಂದೂ 'ಪತ್ನಿಯೇ ಮಂತ್ರಿ'

## ಮಗುವಿಗೂ ಇದೆ ಬೆಲೆ!

ಮಕ್ಕಳನ್ನು ದೇವರ ಕೊಡುಗೆ ಎಂದು ಭಾವಿಸುತ್ತಿದ್ದ ಸಂದರ್ಭವೊಂದಿತ್ತು. ಆ ನಂಬಿಕೆ ಈಗಲೂ ಇದೆಯಾದರೂ, ಮಕ್ಕಳಾಗಲು ದೈವರ ಅನುಗ್ರಹವಷ್ಟೇ ಸಾಲದು ಎನ್ನುವ ಅರಿವು ವ್ಯಾಪಕವಾಗುತ್ತಿದೆ. ಮಕ್ಕಳಾಗುವುದು ಖರ್ಚಿನ ಬಾಬತ್ತು ಎನ್ನುವ ತಿಳಿವಳಿಕೆಯೂ ಯುವಜನರಿಗಿದೆ. ಈ ಮೊದಲು ಅಪ್ಪ–ಅಮ್ಮ ಆಗಲಿಕ್ಕೆ ಮಾನಸಿಕವಾಗಿ ಸಿದ್ಧತೆ ನಡೆಸುತ್ತಿದ್ದರು. ಈಗ ಆರ್ಥಿಕ ಸಿದ್ಧತೆಯನ್ನೂ ನಡೆಸಬೇಕಾಗಿದೆ. ಗರ್ಭಿಣಿ ಎಂದು ಖಚಿತಪಡಿಸಿಕೊಳ್ಳುವುದರಿಂದ ಹಿಡಿದು, ಗರ್ಭಾವಸ್ಥೆಯ ಪ್ರತಿ ಹಂತವೂ ಹಣಕಾಸಿನೊಂದಿಗೆ ತಳುಕು ಹಾಕಿಕೊಂಡಿದೆ. ಗರ್ಭಿಣಿಯ ವೈದ್ಯಕೀಯ ಉಪಚಾರಗಳು ದುಬಾರಿಯಾಗಿವೆ. ಇದರ ಜೊತೆಗೆ, ಪ್ರಸವ ಕೂಡ ದೊಡ್ಡ ಖರ್ಚಿನ ವಿಷಯವಾಗಿದೆ. ಮಗುವಿನ ಜನನದೊಂದಿಗೆ ಅಗತ್ಯಗಳ ಪಟ್ಟಿಯೂ ಬೆಳೆಯತೊಡಗುತ್ತದೆ.

ಬೆಳೆಯುವ ಮಕ್ಕಳಿಗೆ ಕಾಲಕಾಲಕ್ಕೆ ಕೊಡಿಸಬೇಕಾದ ಚುಚ್ಚುಮದ್ದುಗಳು, ಔಷಧಿಗಳು ದುಬಾರಿಯಾಗಿವೆ. ಹಸುಗೂಸುಗಳನ್ನು ಕೇಂದ್ರವಾಗಿಸಿಕೊಂಡೇ ಮಾರುಕಟ್ಟೆಯೊಂದು ರೂಪುಗೊಂಡಿದೆ. ಈ ಮಾರುಕಟ್ಟೆಯ ಭಾಗವಾಗಿ ಶಿಕ್ಷಣ ವ್ಯವಸ್ಥೆಯೂ ರೂಪುಗೊಂಡಿರುವುದನ್ನು ಗಮನಿಸಬೇಕು.

ಮಗು ಮಾಡಿಕೊಳ್ಳುವುದು ಹಾಗೂ ಜನಿಸಿದ ಮಗುವನ್ನು ಸಾಕುವುದು – ಎರಡೂ ಪೋಷಕರನ್ನು ದೈಹಿಕವಾಗಿ ಮಾನಸಿಕವಾಗಿ ಹಣ್ಣು ಮಾಡುವುದರ ಜೊತೆಗೆ, ಆರ್ಥಿಕವಾಗಿಯೂ ಸಮಸ್ಯೆ ಸೃಷ್ಟಿಸುತ್ತವೆ. ಆ ಕಾರಣದಿಂದಲೇ, ಬಹುತೇಕರು 'ಒಂದು ಮಗು ಸಾಕು' ಎನ್ನುವ ನಿಲುವಿಗೆ ಬರುತ್ತಿದ್ದಾರೆ. ಮಕ್ಕಳಿರಲಿ ಮನೆ ತುಂಬ ಎಂದು ಭಾವಿಸಿರುವವರು ಕೂಡ, ಮಕ್ಕಳನ್ನು ಸಾಕುವ ಸವಾಲುಗಳಿಗೆ ಅಳುಕಿ ಒಂದು ಮಗುವಿಗೆ ಸಮಾಧಾನಪಟ್ಟುಕೊಳ್ಳಬೇಕಾದ ಸಂದರ್ಭ ಇಂದಿನದು.